GULBARGA UNIVERSITY
"Jnana Ganga", GULBARGA - 585 106, Karnataka, India.
☎ 08472-263202
Fax. 08472-263206
E-Mail: root@guluni.kar.nic.in
Grams: UNIGUL

ಕ್ರ.ಸಂ.ಗುವಿಗು/ವಿಮವಿ/ಬಿಓಎಸ್/2014-15/ 8087 ದಿನಾಂಕ: 4/3/2015

**ಸುತ್ತೋಲೆ**

ವಿಷಯ:- ಎಂ.ಫಿಲ್./ಪಿಹೆಚ್.ಡಿ. ಪ್ರವೇಶಾತಿಗಾಗಿ 371 (ಜೆ) ಪ್ರಮಾಣ ಪತ್ರ ಹಾಗೂ ಇತರ ಮೀಸಲಾತಿ ವಿವರಗಳ ಬಗ್ಗೆ.

ಉಲ್ಲೇಖ:-1. ಈ ಕಚೇರಿ ಸುತ್ತೋಲೆ ಸಂಖ್ಯೆ ಗುವಿಗು/ವಿಮವಿ/ಬಿಓಎಸ್/2014-15/7113 ದಿನಾಂಕ 01.12.2014

2. ಈ ಕಚೇರಿ ಸುತ್ತೋಲೆ ಸಂಖ್ಯೆ ಗುವಿಗು/ವಿಮವಿ/ಬಿ.ಓ.ಎಸ್./2014-15/7883 ದಿನಾಂಕ 21.02.2015
3. ಡೀನರ ~~ಸಮಿತಿ~~ ಸಭೆಯ ದಿನಾಂಕ 03.03.2015
4. ಕುಲಪತಿಗಳ ಒಪ್ಪಿಗೆ ದಿನಾಂಕ 4-3-2015

ದಿನಾಂಕ 03.03.2015 ರಂದು ಜರುಗಿದ ಎಲ್ಲಾ ನಿಕಾಯದ ಡೀನ್‌ರ ಸಭೆಯ ನಿರ್ಣಯದಂತೆ, ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರಿಗೆ ಎಂ.ಫಿಲ್./ಪಿಹೆಚ್.ಡಿ. ಪ್ರವೇಶಕ್ಕೆ ಸಂಬಂಧಿಸಿದಂತೆ ಈ ಕೆಳಕಾಣಿಸಿದ ಮಾಹಿತಿಯನ್ನು ಈ ಮೂಲಕ ತಿಳಿಸಲಾಗುತ್ತಿದೆ

1. ಈಗಾಗಲೇ ಉಲ್ಲೇಖ (1)ರ ಸುತ್ತೋಲೆಯನ್ವಯ ಎಲ್ಲಾ ಅಧ್ಯಯನ ವಿಭಾಗಗಳಲ್ಲಿ ಸಂವಿಧಾನದ ಅನುಚ್ಛೇದ 371(ಜೆ) ರನ್ವಯ ಮೀಸಲಾತಿ ಜಾರಿಗೊಳಿಸಿ; ಉಲ್ಲೇಖ (2) ರ ಸುತ್ತೋಲೆಯನ್ವಯ ಪ್ರಸಕ್ತ ಎಂ.ಫಿಲ್/ಪಿಹೆಚ್‌ಡಿ ಪ್ರವೇಶಾತಿ ಸಂದರ್ಶನ ಸಮಯದಲ್ಲಿ ಅಭ್ಯರ್ಥಿಗಳು 371 (ಜೆ) ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿತ್ತು.

   ಹಲವಾರು ಅಭ್ಯರ್ಥಿಗಳಿಗೆ ಇನ್ನೂ ಸರ್ಕಾರದಿಂದ 371(ಜೆ) ಪ್ರಮಾಣ ಪತ್ರ ವಿತರಣೆ ಆಗಿರದ ಕಾರಣ, ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು 371(ಜೆ) ಮೀಸಲಾತಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸಂದರ್ಶನ ಸಮಯದಲ್ಲಿ 371(ಜೆ) ಪ್ರಮಾಣ ಪತ್ರ ಸಲ್ಲಿಸದೇ ಇದ್ದಲ್ಲಿ ಅಭ್ಯರ್ಥಿಯು ಹೈದ್ರಾಬಾದ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಬಗ್ಗೆ ಇತರ ದಾಖಲಾತಿಗಳನ್ನು ಪರಿಶೀಲಿಸಿ, ಖಚಿತ ಪಡಿಸಿಕೊಂಡು ಅಭ್ಯರ್ಥಿಯಿಂದ ಪ್ರವೇಶ ಸಮಯದಲ್ಲಿ 371(ಜೆ) ಪ್ರಮಾಣ ಪತ್ರ ಸಲ್ಲಿಸುವ ಬಗ್ಗೆ ಮುಚ್ಚಳಿಕೆ ಪತ್ರ ಪಡೆದು ಕ್ರಮಜರುಗಿಸಲು ಸೂಚಿಸಲಾಗಿದೆ. ಒಂದು ವೇಳೆ, ಅಭ್ಯರ್ಥಿಯು ಪ್ರವೇಶಾತಿ ಸಮಯದಲ್ಲಿ 371(ಜೆ) ಪ್ರಮಾಣ ಪತ್ರ ಸಲ್ಲಿಸದಿದ್ದಲ್ಲಿ ಅವರ ಪ್ರವೇಶಾತಿಯು ರದ್ದಾಗುತ್ತದೆ ಎಂಬ ಅಂಶವನ್ನು ಈ ಮೂಲಕ ತಿಳಿಸಲಾಗಿದೆ.

Rochal

Gulbarga University
1227
Computer Centre
4-3-15

Bos

2. ಪ್ರಸ್ತುತ ಎಂ.ಫಿಲ್./ಪಿಹೆಚ್.ಡಿ. ಪ್ರವೇಶಾತಿಯಲ್ಲಿ ಈಗಾಗಲೇ ಇತರ ಸ್ನಾತಕೋತ್ತರ ಕೋರ್ಸುಗಳಲ್ಲಿರುವಂತೆ ಸರ್ಕಾರದ ಮೀಸಲಾತಿಯ ಪ್ರಕಾರ ರೋಸ್ಟರ ಪದ್ಧತಿ ಅಳವಡಿಸಿಕೊಂಡು ಪ್ರವೇಶ ಪ್ರಕ್ರಿಯೆ ನಡೆಸತಕ್ಕದ್ದು.

3. ಎಂ.ಫಿಲ್./ಪಿಹೆಚ್.ಡಿ. ಪ್ರವೇಶ ಪರೀಕ್ಷೆಯ ಕನಿಷ್ಠ ಅಂಕಗಳನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗಿರುವಂತೆ ಪ್ರವರ್ಗ-I ರ ಅಭ್ಯರ್ಥಿಗಳಿಗೂ 40ಕ್ಕೆ ನಿಗದಿಪಡಿಸಲಾಗಿದ್ದು, ಪ್ರವೇಶಾತಿಯ ಸಮಯದಲ್ಲಿ 40 ಅಂಕಪಡೆದ ಪ್ರವರ್ಗ -I ರ ಅಭ್ಯರ್ಥಿಗಳನ್ನು ಪರಿಗಣಿಸತಕ್ಕದ್ದು.

ಈ ಬಗ್ಗೆ ಹೆಚ್ಚಿನ ವಿವರವಾದ ಮಾಹಿತಿ ಅವಶ್ಯಕವಿದ್ದಲ್ಲಿ ಸಂಬಂಧಪಟ್ಟ ನಿಕಾಯದ ಡೀನ್‌ರನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಕುಲಸಚಿವರು 4/3/15
ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಗೆ,
ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರಿಗೆ, ಗುವಿಗು
ಪ್ರತಿಗಳು
1. ಡೀನರು, ಶಿಕ್ಷಣ ನಿಕಾಯ ಗು.ವಿ.ಗುಲಬರ್ಗಾ ರವರ ಮಾಹಿತಿಗಾಗಿ
2. ಕುಲಸಚಿವರು (ಮೌಲ್ಯಮಾಪನ) ಗು.ವಿ.ಗು. ರವರ ಮಾಹಿತಿಗಾಗಿ
3. ವಿತ್ತಾಧಿಕಾರಿಗಳು, ಗು.ವಿ.ಗುಲಬರ್ಗಾ ರವರ ಮಾಹಿತಿಗಾಗಿ
4. ಮುಖ್ಯಸ್ಥರು, ಗಣಕ ಕೇಂದ್ರ, ಇವರಿಗೆ ಈ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
5. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ ಗು.ವಿ.ಗುಲಬರ್ಗಾ ರವರ ಮಾಹಿತಿಗಾಗಿ

BOS